ಅಧ್ಯಕ್ಷರು :— ಇಲ್ಲ, ತಾವು ಮೊದಲು ಕೊಟ್ಟಿದ್ದು ಡಿಸ್ಟ್ರಿಕ್ಟ್ ಹೆಡ್ ಕ್ವಾರ್ಟರ್ಸ್ ಚಿಕ್ಕಬಳ್ಳಾಪುರದ ಬಗ್ಗೆ.

ಶ್ರೀ ಎನ್. ಸಂಪಂಗಿ :— ಇವತ್ತು ರಾಷ್ಟ್ರೀಯ ಕ್ರೀಡೆಗಳ ಬಗ್ಗೆ ಮಾತನಾಡಬೇಕಾಗಿದೆ, ಎಕೆಂದರೆ ಪತ್ರಿಕೆಯಲ್ಲೂ ಬಂದಿದೆ.

ಅಧ್ಯಕ್ಷರು :— ಮಾತನಾಡಿವ ಪ್ರಶ್ನೆ ಇಲ್ಲ. ಶೂನ್ಯ ವೇಳೆಯಲ್ಲಿ ನೀವು ರೈಸ್ ಮಾಡಬಹುದು. ಮಂತ್ರಿಗಳಿಗೆ ಇಷ್ಟ ಇದ್ದರೆ ಉತ್ತರ ಕೊಡಬಹುದು ಇಲ್ಲದೆ ಇದ್ದರೆ ಇಲ್ಲ.

ಶ್ರೀ ಎನ್. ಸಂಪಂಗಿ :— ಮಾನ್ಯ ಮಂತ್ರಿಗಳು ಇದ್ದಾರೆ, ನ್ಯಾಷನಲ್ ಗೇಮ್ಸ್‌ನಲ್ಲಿ ಅವ್ಯವಹಾರ ನಡೆದಿದೆ.

ಅಧ್ಯಕ್ಷರು :— ನಮ್ಮ ರೂಲ್ಸ್ ಪ್ರಕಾರ ಹಾಗೆಯೇ ಇರುವುದು. ನಿನ್ನೆ ನೀವೇ ಒಪ್ಪಿಕೊಂಡು ಬಂದಿದ್ದೀರಲ್ಲಾ, ನಮಗೆ ಆನ್ಸರ್ ಬೇಕಾಗಿಲ್ಲ ಎಂದು.

ಶ್ರೀ ಎನ್. ಸಂಪಂಗಿ :— 1997ನೇ ಇಸವಿಯಲ್ಲಿ ...

(ಗೊಂದಲ)

ಅಧ್ಯಕ್ಷರು :— ನೀವು ಹಾಗೆ ಹೇಳಲಿಲ್ಲ. ನಮಗೆ ಉತ್ತರ ಬೇಕಾಗಿಲ್ಲ. ಪುನ: ರೈಸ್ ಮಾಡುತ್ತೇವೆ ಎಂದು ಹೇಳಿದಿರಿ.

ಶ್ರೀ ಎ. ರಾಮದಾಸ್ :— ಉತ್ತರ ಇಲ್ಲದಿದ್ದರೆ ಹೇಗೆ.

ಅಧ್ಯಕ್ಷರು :— ನಿನ್ನೆ ನೀವು 10-12 ಜನ ಸದಸ್ಯರು ಬಂದು ಏನು ಹೇಳಿದಿರಿ ನಾವು ರೈಸ್ ಮಾಡುತ್ತೇವೆ ನಮಗೆ ಉತ್ತರ ಬೇಕಾಗಿಲ್ಲ ಎಂದು ಹೇಳಿದಿರಿ. ಅದನ್ನು ಏಕೆ ಇವತ್ತು ತಿರುಗಾ ಮುರುಗಾ ಮಾಡುತ್ತಿದ್ದೀರಿ? ಮಂತ್ರಿಗಳು ಇಷ್ಟಪಟ್ಟರೆ ಅವರು ಉತ್ತರ ಕೊಡಬಹುದು.

ವಿಷಯ: (ಉ) 1997ನೇ ಇಸವಿಯಲ್ಲಿ ರಾಷ್ಟ್ರೀಯ ಕ್ರೀಡೆಗಳನ್ನು ನಡೆಯುವ ಸಂದರ್ಭದಲ್ಲಿ ಆಗಿದೆ ಎನ್ನಲಾದ ಅವ್ಯವಹಾರಗಳ ಬಗ್ಗೆ.

ಶ್ರೀ ಎನ್. ಸಂಪಂಗಿ :— 1997ನೇ ಇಸವಿಯಲ್ಲಿ ಕರ್ನಾಟಕ ರಾಜ್ಯದಲ್ಲಿ ಬಹಳ ಒಂದು ಸಂಭ್ರಮದಿಂದ ರಾಷ್ಟ್ರೀಯ ಕ್ರೀಡೆಗಳನ್ನು ನಡೆಸಿದರು. ರಾಷ್ಟ್ರೀಯ ಕ್ರೀಡೆಗಳನ್ನು ನಡೆಸುವಂತಹ ಸಂದರ್ಭದಲ್ಲಿ ಬಹಳ ಅವ್ಯವಹಾರ ಆಗಿದೆ. ಮೇಲು

ನೋಟಕ್ಕೆ ಕಾಣಿಸತಕ್ಕದ್ದು ರಾಷ್ಟ್ರೀಯ ಕ್ರೀಡೆಗಳ ಹೆಸರಿನಲ್ಲಿ ಅನೇಕ ಅವ್ಯವಹಾರಗಳು ಆಗಿ, ಕೋಟ್ಯಾಂತರ ರೂಪಾಯಿಗಳನ್ನು ಅಧಿಕಾರಿಗಳು ಮತ್ತು ಕಂಟ್ರಾಕ್ಟ್‌ದಾರರು ವಸೂಲಿ ಮಾಡಿಕೊಂಡಿದ್ದಾರೆ. ಇದರಿಂದ ನಮ್ಮ ಕ್ರೀಡಾಪಟುಗಳಿಗೆ ಗ್ರಾಮಾಂತರ ಪ್ರದೇಶದ ಕ್ರೀಡಾಪಟುಗಳಿಗೆ ಉತ್ತೇಜನ ಸಿಗದಂತಹ ಪರಿಸ್ಥಿತಿ ಇವತ್ತು ನಮ್ಮಲ್ಲಿ ಆಗಿದೆ. ರಾಷ್ಟ್ರೀಯ ಕ್ರೀಡೆಗಳ ಸಂದರ್ಭದಲ್ಲಿ ಯಾರನ್ನು ಯಾರೂ ಕೇಳಲಿಲ್ಲ. ಲಕ್ಷಾಂತರ ರೂಪಾಯಿ ಸರ್ಕಾರದ ಹಣ ಪೋಲಾಗಿದೆ. ಒಳ ಕ್ರೀಡಾಂಗಣ ವಿಚಾರದಲ್ಲಿ ಒಂದು ವಿಚಾರ ಹೇಳಲು ಬಯಸುತ್ತೇನೆ. ಒಳಾಂಗಣ ಕ್ರೀಡಾಂಗಣದಲ್ಲಿ ಸಿಂಥೆಟಿಕ್ ಫ್ಲೋರಿಂಗ್ ಅಳವಡಿಸುವುದಕ್ಕೋಸ್ಕರ ಸುಮಾರು 67 ಲಕ್ಷ ರೂಪಾಯಿಗಳನ್ನು ಫಾರಿನ್ ಕಂಟ್ರಿಗಳಿಂದ ತರಿಸಿದರು. ಇದಕ್ಕೆ ಯಾರೂ ಕೇಳಲಿಲ್ಲ. ಅವರಷ್ಟಕ್ಕೆ ಅವರೇ ಹೋಗರು. ಅಲ್ಲಿಂದ ಸಿಂಥೆಟಿಕ್ ಫ್ಲೋರಿಂಗ್ ತಂದರು. ತಂದು ಬೆಂಗಳೂರಿನ ಒಂದು ಗೋಡೌನಿನಲ್ಲಿ ಬಿಸಾಡಿ ಬಿಟ್ಟಿದ್ದಾರೆ. ಅದನ್ನು ಯಾವ ಒಳಾಂಗಣ ಕ್ರೀಡಾಂಗಣದಲ್ಲೂ ಹಾಕಿಸಲಿಲ್ಲ. ಕ್ರೀಡೆಗಳ ವಿಚಾರದಲ್ಲಿ ಕೋಟ್ಯಾಂತರ ರೂಪಾಯಿ ಅವ್ಯವಹಾರವಾಗಿದೆ. ಇದರ ಬಗ್ಗೆ ಚರ್ಚೆಗೆ ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರು :— ಸಂಪಂಗಿಯವರೆ, ಸ್ಟೋರ್ಟ್ಸ್ ಡಿಮ್ಯಾಂಡ್ ಬಂದಾಗ ಚರ್ಚೆ ಮಾಡುವ ವಿಚಾರವನ್ನು ನೀರು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸುತ್ತಿದ್ದೀರಿ.

ಶ್ರೀ ಎನ್. ಸಂಪಂಗಿ :— ಇವತ್ತು ಎ.ಜಿ.ಯರು ಅಬ್ಜೆಕ್ಷನ್ ಮಾಡಿ ಸುಮಾರು ಕೋಟಿ ರೂಪಾಯಿಗಳು ಅವ್ಯವಹಾರವಾಗಿರುವುದನ್ನು ಹೇಳಿದ್ದಾರೆ. ಅದರ ಬಗ್ಗೆ ತನಿಖೆ ಆಗಬೇಕಲ್ಲವೇ?

ಅಧ್ಯಕ್ಷರು :— ಬಹಳ ಅರ್ಜೆಂಟ್ ಇದ್ದರೆ, ಅವತ್ತೆ ತೀರ್ಮಾನವಾಗಬೇಕು, ಇಲ್ಲದಿದ್ದರೆ, ಅನಾಹುತವಾಗುತ್ತದೆಂದರೆ ಶೂನ್ಯವೇಳೆಯಲ್ಲಿ ಪ್ರಶ್ನೆ ಕೇಳಬೇಕು. ನೀವು ಸ್ಟೋರ್ಟ್ಸ್ ಡಿಮ್ಯಾಂಡ್ ಬಂದಾಗ ವಿಚಾರ ಪ್ರಸ್ತಾಪಿಸಿ, ನಾನು ತಮಗೆ 15 ನಿಮಿಷ ಸಮಯ ಕೊಡುತ್ತೇನೆ. ಸ್ಟೋರ್ಟ್ಸ್ ಡಿಮ್ಯಾಂಡ್ ಅನ್ನು ಇವತ್ತು ಮಂಡಿಸುತ್ತಾರೆ.

(ಈ ಹಂತದಲ್ಲಿ ಶ್ರೀ ಎನ್. ಸಂಪಂಗಿಯವರು ಬಾವಿಗೆ ತೆರಳಿದರು)

ಅಧ್ಯಕ್ಷರು :— ದಯವಿಟ್ಟು, ಸದಸ್ಯರು ಈ ರೀತಿಯ ಬೆಳವಣಿಗೆಯನ್ನು ಬೆಳೆಸಿಕೊಳ್ಳಬೇಡಿ. ಮಾತು ಮಾತಿಗೂ ನಾವು ಹೇಳಿದ್ದಕ್ಕೆ ಅವರು ಉತ್ತರಿಸಲಿಲ್ಲವೆಂದು ಈ ರೀತಿ ಬಾವಿಗೆ ಬರುವುದರಲ್ಲಿ ಅರ್ಥವೇನಿದೆ? ಈ ರೀತಿ ಬರುವುದು ನ್ಯಾಯಯುತವಲ್ಲ. ಸ್ಟೋರ್ಟ್ಸ್ ಡಿಮ್ಯಾಂಡ್ ಬಂದಾಗ ಮಾತನಾಡುವ ವಿಚಾರವನ್ನು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿದರೆ ಹೇಗೆ? ಇವತ್ತು ಸ್ಟೋರ್ಟ್ಸ್ ಡಿಮ್ಯಾಂಡ್ ಮಂಡಿಸುತ್ತಾರೆ. ನಾಳೆ,

ನಾಡಿದ್ದು ನಿಮಗೆ ನಾನು ಸಮಯ ಕೊಡುತ್ತೇನೆ, ಆಗ ಮಾತನಾಡಿ. ತಾವು ತಮ್ಮ ಸ್ಥಳಕ್ಕೆ ದಯವಿಟ್ಟು ಹೋಗಬೇಕು.

ಅಧ್ಯಕ್ಷರು :— ಶೂನ್ಯ ವೇಳೆಯಲ್ಲಿ ಪ್ರತಿದಿನ 7-8 ವಿಷಯಗಳಿಗೆ ಅಲೋ ಮಾಡುತ್ತಿದ್ದೇನೆ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ :— ನಾನೂ 17ನೇ ತಾರೀಖು ಸೂಚನೆ ಕೊಟ್ಟಿದ್ದೆ, ಇವತ್ತೂ ಬಂದಿಲ್ಲ.

ಅಧ್ಯಕ್ಷರು :— ಸರ್ಕಾರಿ ಕೆಲಸ ಆಗಬೇಡವೇ? ಸದನದಲ್ಲಿ ಬೇಕಾದಷ್ಟು ವರ್ಕ್ ನಡೆಯುತ್ತಿದೆ. ಅದಕ್ಕೆ ತಾವು ಅನುವು ಮಾಡಿಕೊಡಬೇಕು. You must co-operate with the government as well as the Chair. ನಾವು ಬರೀ ಶೂನ್ಯ ವೇಳೆ ವಿಷಯವನ್ನೇ ತೆಗೆದುಕೊಂಡರೆ ಹೇಗೆ? ಸರ್ಕಾರಿ ಕೆಲಸಗಳಿಲ್ಲವೇ?

ವಿಷಯ: (೮೦) ಆಲಮಟ್ಟಿ ಜಲಾಶಯದ ಹಿನ್ನೀರಿನಿಂದುಂಟಾದ ದುಷ್ಪರಿಣಾಮಗಳ ಬಗ್ಗೆ

ಶ್ರೀ ಪಿ.ಹೆಚ್. ಪೂಜಾರ್ (ಬಾಗಲಕೋಟೆ) :— ಕಳೆದ ವರ್ಷ ಆಲಮಟ್ಟಿ ಜಲಾಶಯದ ಹಿನ್ನೀರಿನಿಂದುಟಾಗುವ ದುಷ್ಪರಿಣಾಮಗಳು, ಬಾಗಲಕೋಟೆ ಸಂಪೂರ್ಣ ಮುಳುಗಡೆಯಾಗುವ ಕುರಿತಂತೆ ಮಾಡಬೇಕೇ ಏಥವಾ ಮಾಡಬೇಡವೆ ಎನ್ನುವ ಕುರಿತಂತೆ ಸರ್ಕಾರಿ ಸಮಿತಿ ರಚಿಸಿತ್ತು. ಅಜಿತ್ ಶೆಟ್ಟರವರರ ನೇತೃತ್ವದ ಆ ತಜ್ಞರ ಸಮಿತಿಗೆ ಆದೇಶ ಕೊಟ್ಟಿತ್ತು. ಆ ಹಿನ್ನಲೆಯಲ್ಲಿ ಇಂದು ನಾನು ಪ್ರಸ್ತಾಪಿಸುತ್ತಿದ್ದೇನೆ. ಬಾಗಲಕೋಟೆ ಆಲಮಟ್ಟಿ ಜಲಾಶಯದಲ್ಲಿ ಮುಳುಗಡೆಯಾಗುವಂಥ ಒಂದು ಬೃಹತ್ ನಗರ. ಅದರ ಜೊತೆಗೆ, ಗ್ರಾಮೀಣ ಭಾಗ ಕೂಡ ಮುಳುಗಡೆಯಾಗುವ ಹಿನ್ನಲೆಯಲ್ಲಿ ಬಾಗಲಕೋಟೆ ನಗರವನ್ನು ಇಡಿಯ.ಗಿ ಸ್ವಾಧೀನಪಡಿಸಿಕೊಳ್ಳಬೇಕೆ ಅಥವಾ ಗೊಟೆ ಕಟ್ಟಿ ಆ ನಗರವನ್ನು ಉಳಿಸಬೇಕೆ ಎಂಬ ಜಿಜ್ಞಾಸೆ 1970ರಿಂದ ಪ್ರಾರಂಭವಾಗಿ 1983 ರಲ್ಲಿ ಕೊನೆಗೊಂಡಿತು. ಆಗ ಹಿಂದಿನ ಸರ್ಕಾರ ತೀರ್ಮಾನಿಸಿ, ಬಾಗಲಕೋಟೆ ಇಡೀ ನಗರವನ್ನು ನಾವು ಮುಳುಗಡೆ ಮಾಡಬೇಕು, ಸ್ಥಳಾಂತರಿಸಬೇಕು, ಪುನರ್ ವಸತಿ ಕಲ್ಪಿಸಬೇಕು, ಬಂಡೀಗಢ ಮಾಜರಿಯಲ್ಲಿ ಒಂದು ಸುಂದರ ನಗರವನ್ನು ಕಟ್ಟಿಕೊಡಲಾಗುವುದೆಂಬ ಭರವಸೆಯನ್ನು ಆಗಿನ ಸರ್ಕಾರ ನೀಡಿದ ನಂತರ, ಇವತ್ತಿನವರೆಗೂ ಮುಳುಗಡೇ ಕಾರ್ಯಕ್ರಮಗಳು ಪ್ರಾರಂಭವಾಗಿದ್ದವು. ಇತ್ತೀಚೆಗೆ ಈಗಿನ ಸರ್ಕಾರ, ಸುಪ್ರೀಂ ಕೋರ್ಟು 519.6 ರವರೆಗೆ ನೀರನ್ನು ನಿಲ್ಲಿಸಬೇಕೆಂದೇನು ಆದೇಶ ಕೊಟ್ಟಿತ್ತು, 521 ರವರೆಗೆ ಬಾಗಲಕೋಟೆಯನ್ನು ತೆಗೆದುಕೊಳ್ಳುವ ತೀರ್ಮಾನವನ್ನು ತೆಗೆದುಕೊಂಡಿದ್ದು, ಅದಕ್ಕೆ